# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 3/2022

| | |
|---|---|
| ಹೆಸರು | :ವಾಸುದೇವ |
| ತಂದೆಯ ಹೆಸರು | :ರಾಮಪ್ಪ |
| ಪ್ರಾಯ | :68 ವರ್ಷ |
| ಉದ್ಯೋಗ | :ಕೃಷಿ |
| ವಾಸ | :ಮರ್ಕಂಜ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 22.06.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿಃ 8.11.2010 ರಂದು ನಾನು ಮರ್ಕಂಜ ಗ್ರಾಮ ಪಂಚಾಯಿತಿಗೆ ಹೋಗಿದ್ದೆ. ಅಲ್ಲಿ ಪೊಲೀಸರು ಇದ್ದರು. ನನ್ನ ಜೊತೆ ಚಾಸಾ-7 ಉತ್ತಯ್ಯರವರು ಸಹ ಇದ್ದರು. ಅಲ್ಲಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಪಂಚಾಯಿತಿಯ ದಾಖಲೆಗಳನ್ನು ತೋರಿಸಿದ್ದು, ಆ ಬಗ್ಗೆ ಪೊಲೀಸರು ಮದ್ಯಾಹ್ನ 11 ರಿಂದ 12 ಗಂಟೆಯವರೆಗೆ ಬರವಣಿಗೆ ಮಾಡಿಕೊಂಡರು. ಸದರಿ ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಬರವಣಿಗೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ದಿಃ 17.11.2010 ರಂದು ನಮ್ಮನ್ನು ಸುಳ್ಯ ಪೊಲೀಸ್ ಠಾಣೆಗೆ ಕರೆಸಿದ್ದರು. ಅಲ್ಲಿ 1 ನೇ ಆರೋಪಿ ಸಹ ಇದ್ದು, ಸದರಿ 1 ನೇ ಆರೋಪಿಯ ಸಹಿ, ಬರವಣಿಗೆ ಮತ್ತು ಹೆಬ್ಬೆಟ್ಟು ಗುರುತುಗಳನ್ನು ಪೊಲೀಸರು ಸುಮಾರು 30 ಹಾಳೆಗಳಲ್ಲಿ ಪಡೆದುಕೊಂಡಿರುತ್ತಾರೆ. ಈ

ಬಗ್ಗೆ ಪೊಲೀಸರು ಬರವಣಿಗೆ ಮಾಡಿಕೊಂಡಿದ್ದು, ಸದರಿ ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಬರವಣಿಗೆಯನ್ನು ನೋಡುತ್ತಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆರೋಪಿ ಶಿವರಾಮ್ ಗೌಡರವರ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳುಳ್ಳ 30 ಹಾಳೆಗಳನ್ನು ನೋಡಿದರೆ ಗುರುತಿಸುತ್ತೇನೆ. (ಅವುಗಳನ್ನು ಸಿಸಿ ನಂಃ 348/15 ರಲ್ಲಿ ನಿಪಿ-37 ರಿಂದ 66 ಎಂದು ಗುರುತಿಸಲಾಗಿದೆ)

ಈಗ ನ್ಯಾಯಾಲಯದ ಮುಂದೆ ಆರೋಪಿ ಶಿವರಾಮ್ ಗೌಡರನ್ನು ನೋಡಿ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ನಾನು ದಿಃ 18.11.2010 ರಂದು ಸ್ಥಳ ಮಹಜರಿಗಾಗಿ ಪಂಚಾಯಿತಿ ಕಚೇರಿಗೆ ಚಾಸಾ-35 ರವರು ನನ್ನನ್ನು ಕರೆಸಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ನಾನು ಈಗ ತೋಟದ ಕೆಲಸ ಮಾಡುತ್ತೇನೆ. ನಾನು ಶಂಕರ ನಾರಾಯಣ ಶಾಸ್ತ್ರಿಗಳ ತೋಟಕ್ಕೆ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಿ ಜೀವನ ನಡೆಸುತ್ತೇನೆ ಎಂದರೆ ಸರಿ. ನಾನು ಮನೆ ಕಟ್ಟಲು ಪಂಚಾಯಿತಿಯಿಂದ ಸಹಾಯಧನ ಪಡೆದುಕೊಂಡಿಲ್ಲ. ನಾನು ಪಂಚಾಯಿತಿಯಲ್ಲಿ ಸಹಾಯಧನ ಕೇಳಿದ್ದೆವು ಅದರೆ ಸಿಕ್ಕಿರುವುದಿಲ್ಲ. ಆ ಸಮಯದಲ್ಲಿ ಶಿವರಾಮ್ ಮತ್ತು ನಂತರ ಚಂದ್ರಕಲಾರವರು ಅಧ್ಯಕ್ಷರಾಗಿದ್ದರು. ನಾನು ಪಂಚಾಯಿತಿ ಸದಸ್ಯನಾಗಿರಲಿಲ್ಲ. ನನಗೆ ಸಹಾಯಧನ ಕೊಡಲಿಲ್ಲ ಎಂಬ ಕಾರಣಕ್ಕೆ ಚಂದ್ರಕಲಾ ಮತ್ತು ಶಿವರಾಮ ರವರ ಮೇಲೆ ಸಣ್ಣ ಅಸಮಾಧಾನ ಇತ್ತು ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನನಗೆ ಪಂಚಾಯಿತಿ ಕಟ್ಟಡದಲ್ಲಿ ಅಂಗಡಿ ಇತ್ತು. ಅಂಗಡಿ ವ್ಯಾಪಾರ ಸಮಯದಲ್ಲಿ ನಾನಾಗಿ ಹೊರಗಡೆ ಹೋಗುತ್ತಿರಲಿಲ್ಲ, ಯಾರಾದರೂ ಕರೆದರೆ ಮಾತ್ರ ಹೋಗುತ್ತಿದ್ದೆ. ಪೊಲೀಸರು ನನ್ನನ್ನು ಹೇಳಿ ಪಂಚಾಯಿತಿಗೆ ಕರೆಸಿದ್ದರು. ನಾನು ಸಹಿ ಮಾಡಿದ ದಾಖಲೆ ಖಾಲಿ ಇರಲಿಲ್ಲ ಅದರಲ್ಲಿ ಟೈಪ್

ಮಾಡಲಾಗಿತ್ತು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನನ್ನ ಮುಂದೆ ಪೊಲೀಸರು ಯಾವುದೇ ಬರವಣಿಗೆ ಮಾಡಿದ್ದಿಲ್ಲ ಎಂದರೆ ಸರಿ. ಪಂಚನಾಮೆಗೆ ನಾನು ಬಿಟ್ಟು ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಶಿವರಾಮ ಗೌಡರ ಬರವಣಿಗೆಗಳನ್ನು ಪಂಚಾಯಿತಿಯಲ್ಲಿ ತೆಗೆದುಕೊಂಡಿರುತ್ತಾರೆ. ನಾನು ಎಲ್ಲಾ ಸಹಿಗಳನ್ನು ಪಂಚಾಯಿತಿ ಕಚೇರಿಯಲ್ಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿಯೂ ಹಾಕಿದ್ದೇನೆ. ಒಂದು ಸಹಿ ಹಾಕಿ ಮತ್ತೊಂದು ಸಹಿ ಹಾಕುವಾಗ 6 ದಿನಗಳು ಕಳೆದಿತ್ತು. ಎರಡೂ ಸಹಿಗಳನ್ನು ಹಾಕಲು ನನ್ನನ್ನು ಶಂಕರ ನಾರಾಯಣ ಶಾಸ್ತ್ರಿಗಳು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ.  ನಾನು ಸಹಿ ಮಾಡಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ, ಈ ನನಗೆ ನೆನಪಿಲ್ಲ. ಎಲ್ಲವೂ ಟೈಪ್ ಮಾಡಿದ ದಾಖಲೆಗಳು. ನಮ್ಮ ಮತ್ತು ಆರೋಪಿಗಳ ನಡುವೆ ಸಂಬಂಧ ಸರಿ ಇಲ್ಲದ ಕಾರಣ ಶಂಕರ ನಾರಾಯಣ ಶಾಸ್ತ್ರಿಗಳು ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿರುವ ಎಲ್ಲಾ ದಾಖಲೆಗಳಿಗೆ ಶಂಕರ ನಾರಾಯಣ ಶಾಸ್ತ್ರಿಗಳು ಠಾಣೆಗೆ ಕರೆದುಕೊಂಡು ಬಂದು ನನ್ನ ಸಹಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಸುಳ್ಯ